ಹಾಸನ ಡಿಸ್ಟ್ರಿಕ್ಟ್.

ತಾರೀಖು 26ನೆ ಜುಲೈ 1907.

ಇನ್ಸಿಹಾರ್.

ಸಕಲೇಶಪುರದ ಲೇಟ್ ಅಗ್ರಿಕಲ್ಚರಲ್ ಬ್ಯಾಂಕಿಗೆ ಬಾಕೀದಾರರಾದ ಉದೇವಾರದ ಬಸವೇಗೌಡರು ಮತ್ತು ಇವರ ಸಹೋದರರುಗಳಿಂದ ಬರಬೇಕಾದ ಲೋ ಬಾಕಿಗಾಗಿ, ಇದರಿಂದ ನಮೂದಾಗುವ ಬ್ಯಾಂಕಿಗೆ ಆಧಾರವಾಗಿರತಕ್ಕ ಸ್ಥಿರಸ್ವತ್ತುಗಳು ಹಾಸನ ಡಿಸ್ಟ್ರಿಕ್ಟು ಮಂಜರಾಬಾದು ತಾಲ್ಲೂಕು ಉದೇವಾರದ ಗ್ರಾಮದಲ್ಲಿ ಸ್ವತ್ತುಗಳು ಇರತಕ್ಕ ಸ್ಥಳದಲ್ಲಿ 1907ನೆ ನವೆಂಬರ್ ಮಾಹೆ ತಾರೀಖು 14ನೆ ಗುರುವಾರದಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಈ ಕೆಳಗೆ ಷೆಡ್ಯೂಲಿನಲ್ಲಿ ನಮೂದಿಸಿರುವ ಸರ್ಕಾರಿ ಸವಾಲ್‌ಗೆ ಒಳಪಡಿಸಿ ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಹರಾಜ್ ಬೈದಾದ ಕೂಡ್ಲೆ ಚಡ ಸವಾಲ್‌ದಾರನು ತನ್ನ ಸವಾಲ್ ಮೊಬಲಗು ಪೈಕಿ ಕೀಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯತು 15ನೆ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೆ ದಿನವು ಸರ್ಕಾರಿ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸು ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತೀ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನು ಸರಕಾರಕ್ಕೆ ದಂಡವಾಗಿ ಠೇರಿಸಿಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಪುರೂ ಹರಾಜ್‌ದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ ಎಲ್ಲಾ ಹಕ್ಕನ್ನು ಹೋಗಲಾಡಿಸಿಕೊಳ್ಳುವನು; ಆದರೆ, ಮೇಲ್ಕಂಡ ಷರತ್ತನ್ನು ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯೂಟಿ ಕಮಿಷನರು ಅವಶ್ಯಕವಾದ ಶಿಫಾರಸ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಪುರೂ ಹರಾಜ್‌ದಾರನ ಸವಾಲ್ ಮೊಬಲಗ್ಗಿಂತಲೂ ಕಮ್ಮಿಯಾದಲ್ಲಿ, ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವಸಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಗವರ್ನಮೆಂಟಿನವರ ಮಂಜೂರಾತಿಗೆ ಒಳಪಟ್ಟಿರುತ್ತೆ.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥವರು ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ; ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವರೋ, ಅಂಥಾವರ ಬರಹ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್ಗಳನ್ನು ಅಂಗೀಕರಿಸುವದಿಲ್ಲ.

ತಾಲ್ಲೂಕು	ಹೋಬಳಿ	ಗ್ರಾಮ	ಸ್ವತ್ತಿನ ವಿವರ — ಜಮೀನು — ಸರ್ವೆ ನಂಬರು	ಬಾಬು ಖುಷ್ಕಿ ತರಿ, ಬಾಗಾಯಿತು ಅಥವಾ ಕಾಫಿ	ವಿಸ್ತೀರ್ಣ ಎ. ಗು.	ಆಕಾರ ರೂ. ಆ. ಪೈ.	ಮರಗಳು, ಭಾವಿಗಳು, ಪಗೈರೆ ಕೊಡಿದ ಮಟ್ಟಿಗೂ ಕರಾರ್ನಾಮೆ ತಪಸೀಲಿ	ಹರಾಜು ಸ್ಥಳ, ತಾರೀಖು ಮತ್ತು ಕಾಲ	ಹರಾಜು ನಿಷಿತಕ್ಕೆ ನರ ಹೆಸರು	ಕ್ರುಜ್ಜಾಗದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಪದ್ಧ
ಮಂಜರಾಬಾದು	ಬೆಳಗೋಡು ಉದೇವಾರ ಅನೆಕಾಲ್ ತೋಟ	ಸಕಲೇಶಪುರ ಅರಹಳ್ಳಿ ರೋಡು ಬಾಜು	ಮೇಲಹಳ್ಳಿ ತೋಟ 214ನೆ ಪೈಕಿ.	ಕಾಫಿ	65 30	66 0 0		ಸದರಿ ತೋಟಗಳಲ್ಲಿ 14ನೆ ನವೆಂಬರ್ 1907 ದಿವಿ 11 ಗಂಟೆ.	ಸಕಲೇಶಪುರದ ಅಸಿಸ್ಟೆಂಟ್ ಕಮಿಷನರವರು.	ಒಂದಕ್ಕೆ 60 ರೂಪಾಯಿ.
			225 226ನೆ ಪೈಕಿ	ಡಿಟೋ	25 18	25 0 0				
				ಡಿಟೋ	5 0	5 0 0				
			187	ಕಾಫಿ	10 21	11 0 0				
			188	ಡಿಟೋ	4 26	4 8 0				
			189	ಡಿಟೋ	10 25	11 0 0				
			190	ಡಿಟೋ	2 5	2 0 0				
			7		124 5	124 8 0				
						7 12 6	ಸೆಸ್ಸು.			
						132 4 6	ಜುಮ್ಮಾ.			

ಕೆ. ಆರ್. ಶ್ರೀನಿವಾಸೈಯ್ಯಂಗಾರ್, ಡೆಪ್ಯೂಟಿ ಕಮಿಷನರ್.